> ನನ್ನ ಪಾಲಿಗೆ ಒಟ್ಟಾರೆ ಬರಹವೇ ಒಂದು ದೋಣಿಯಾನ. ಲೇಖಕನ ಮನಸ್ಸು ಒಮ್ಮೆ ಆ ಬದಿಯ ಗದ್ಯದ ಹುಟ್ಟು ಹಾಕಿದರೆ ಮತ್ತೊಮ್ಮೆ ಈ ಬದಿಯ ಪದ್ಯದ ಹುಟ್ಟು ಹಾಕುತ್ತದೆ. ಹೀಗೆ ಹುಟ್ಟು ಹಾಕುತ್ತಲೇ ದೋಣಿ ಮುಂದೆ ಸಾಗುತ್ತದೆ.

◆ **ನೀವು ನಿರ್ದಿಷ್ಟ ಛಂದಸ್ಸಿನ ಗಜಲ್ ಪ್ರಕಾರದಲ್ಲಿ ಕೃಷಿ ಮಾಡಿರುವ ಜೊತೆಗೇ ಮುಕ್ತಛಂದಸ್ಸಿನ ನ್ಯೂ ವೇವ್ ಪೊಯಟ್ರಿಯಲ್ಲೂ ಕೃಷಿ ಮಾಡಿದ್ದೀರಿ. ಇವೆರಡರಲ್ಲಿ ಮೊದಲು ನೀವು ಬರೆದದ್ದು ಯಾವ ಪ್ರಕಾರದಲ್ಲಿ? ನಂತರ ಇನ್ನೊಂದು ಕಾವ್ಯ ಪ್ರಕಾರದ ಕಡೆಗೆ ಹೊರಳುವಂತಾಗಿದ್ದು ಹೇಗೆ?**

ನಾನು ಮೊದಲು ಬರೆದದ್ದು ಗಜಲ್ ಪ್ರಕಾರದಲ್ಲಿ. ವಿದ್ಯಾರ್ಥಿ ದೆಸೆಯಲ್ಲಿಯೇ ನನ್ನ ಗಜಲ್‌ಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡದ್ದು ಮತ್ತು ಮಹತ್ವದ ಸಂಪುಟಗಳಲ್ಲಿ ಸೇರ್ಪಡೆಗೊಂಡದ್ದು ನನ್ನ ಅದೃಷ್ಟವೇ ಸರಿ. ನಂತರವಷ್ಟೇ ನಾನು ಮುಕ್ತ ಛಂದಸ್ಸಿನ ಕಾವ್ಯದ ಕಡೆ ಹೊರಳಿದ್ದು. 1976ರಲ್ಲಿ ನನ್ನ ಮೊದಲ ಹೊಸ ಅಲೆಯ ಕವನ ಸಂಕಲನ ಪ್ರಕಟವಾಯಿತು. ನಾನು ಹೇಳಬೇಕೆಂದುಕೊಂಡದ್ದೆಲ್ಲವನ್ನೂ ಗಜಲ್ ಪ್ರಕಾರದಲ್ಲಿಯೇ ಅಳವಡಿಸಿ ಹೇಳಲು ಸಾಧ್ಯವಿದೆ ಎಂದು ಕಾಲಾನಂತರದಲ್ಲಿ ನಾನು ಮನವರಿಕೆ ಮಾಡಿಕೊಂಡೆ. ಹಾಗಾಗಿ ನನ್ನ ನಂತರದ ಸಂಕಲನವು ಈ ಎರಡು ವಿಧದ ಪದ್ಯಗಳ ಮಿಶ್ರಣವಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಪಾತ್ರವಾದ 'ಬರ್ಫ್ ಜೊ ಥಹ್ಯಾಲ್' (ಮಂಜಿನಿಂದ ಆದಂಥ) ಸಂಕಲನವೊಂದೇ ಕೇವಲ ಗಜಲ್‌ಗಳ ಸಂಕಲನವಾಗಿದ್ದು ಮಿಕ್ಕೆಲ್ಲವೂ ಗಜಲ್ ಮತ್ತು ಮುಕ್ತಛಂದದ ಕವಿತೆ ಇವೆರಡರ ಮಿಶ್ರಣವಾಗಿಯೇ ಪ್ರಕಟವಾಗಿವೆ.

◆ **ಗಜಲ್ ಪ್ರಕಾರದ ಅನನ್ಯತೆಯೇ ಅದರ ಛಂದಸ್ಸು. ಹಲವೊಮ್ಮೆ ಅದೇ ಬಂಧನವೆನಿಸುವ ಸಾಧ್ಯತೆಯೂ ಉಂಟು. ಹೀಗೆ ಛಂದಸ್ಸಿನ ಬಂಧನವನ್ನು ಕಾಲಿಗೆ ಗುಂಡಿನಂತೆ ಕಟ್ಟಿಕೊಂಡು ಕಾವ್ಯದ ಹಾದಿಯನ್ನು ಬಹುದೂರದವರೆಗೆ ಕ್ರಮಿಸಲು ಸಾಧ್ಯವೇ, ಅದೂ ಸಹಲೇಖಕರೆಲ್ಲ ಯಾವ ನಿರ್ಬಂಧಗಳೂ ಇಲ್ಲದಂಥ ಮುಕ್ತ ಛಂದಸ್ಸಿನಲ್ಲಿ ಸಹಜವಾಗಿ ಉಕ್ಕಿ ಪ್ರವಹಿಸುತ್ತಿರುವಾಗ?**

ಹೌದು. ನೀವು ಹೇಳಿದ್ದು ಅಕ್ಷರಶಃ ಸತ್ಯ. ಛಂದೋಬದ್ಧವಲ್ಲದ್ದು ಗಜಲೇ ಅಲ್ಲ. ಛಂದೋಲಕ್ಷಣವೆಂಬುದು ಯಾವುದೇ ಗಜಲಿನ ಅನಿವಾರ್ಯ ಮತ್ತು ಅವಿಭಾಜ್ಯ ಅಂಗ. ಅದನ್ನು ತಪ್ಪಿಸುವಂತಿಲ್ಲ. ಆದರೆ ಅದೆಂದಿಗೂ ಬಂಧನ ಅಲ್ಲ. ನನಗಂತೂ ಎಂದೂ ಹಾಗನಿಸಿಲ್ಲ. ಗಜಲ್ ಬರೆಯಲಿಚ್ಛಿಸುವವರು ಮೊದಲು ಈ ಛಂದಸ್ಸನ್ನು ಅಂತರ್ಗತಗೊಳಿಸಿಕೊಳ್ಳಬೇಕು, ಆಗ ಮಾತ್ರ ಅವರು ಈ ಪ್ರಕಾರದಲ್ಲಿ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಉತ್ತಮ ಗಜಲ್‌ಕಾರನ ರಕ್ತದಲ್ಲಿಯೇ ಅದರ ಛಂದಸ್ಸು ಪ್ರವಹಿಸುತ್ತಿರುತ್ತದೆ. ಹಾಗಾಗಿ ಅಭಿವ್ಯಕ್ತಿಗೆ ಯಾವುದೇ ಬಗೆಯ ಅಡೆತಡೆಗಳಿಲ್ಲದೆ ನಿರರ್ಗಳವಾಗಿ ಗಜಲ್ ಮೂಡಿಬರುತ್ತದೆ. ಇದನ್ನೊಂದು ಸರಳ ಉದಾಹರಣೆಯ ಮೂಲಕ ನಾನು ವಿವರಿಸುವೆ. ಛಂದಸ್ಸಿನ ಮೇಲೆ ಪೂರ್ಣಪ್ರಭುತ್ವ ಸಾಧಿಸಿದವರು ಲಿಫ್ಟಿನಲ್ಲಿ ಇದ್ದವರಂತೆ. ಯಾವುದೇ ಪರಿಶ್ರಮದ ಸಹಾಯವಿಲ್ಲದೆ ಅವರು ಗಜಲಿನ ನೂರನೇ ಅಂತಸ್ತನ್ನೂ ತಲುಪಬಹುದು.